Review Of Research
ISSN 2249-894X

Impact Factor : 3.1402(UIF)
Volume - 4 | Issue - 10 | July - 2015

# “CHALUKYA MAHARANI SUGGALE”

Neelambika Policepatil

ಕಲ್ಯಾಣ ಚಾಲುಕ್ಯ ಮಹಾರಾಣಿ ಸುಗ್ಗಲೆ ವೀರಶೈವ ಧರ್ಮ, ಸಂಸ್ಕೃತಿಯ ಮೊದಲಿನ ಮಹಿಳಾ ಪ್ರತಿನಿಧಿ. ಶರಣರನ್ನು ಕಂಡು, ಭಕ್ತಿಯಿಂದ ಅವರನ್ನು ಗೌರವಿಸಿದ ಪ್ರಥಮ ವೀರಶೈವ ಮಹಾರಾಣಿ. ಆ ಧರ್ಮಕ್ಕೆ ಆಶ್ರಯವಿತ್ತು ಅದನ್ನು ಪೋಷಿಸುತ್ತಾ, ಆ ಧರ್ಮ ತತ್ವಗಳನ್ನು ನಿಷ್ಠೆಯಿಂದ ಪಾಲಿಸಿ ವೀರಮಾಹೇಶ್ವರಿ ಎನಿಸಿದ್ದಾಳೆ. ಒಂದೆಡೆ ಸತಿಧರ್ಮ ಆದರ್ಶ ರೀತಿಯಿಂದ ಪಾಲಿಸುತ್ತಾ ಇನ್ನೊಂದೆಡೆ ಆಧ್ಯಾತ್ಮಿಕತೆಯಲ್ಲಿ ತಲ್ಲಿನಗೊಂಡಿದ್ದಳು. ಆಧ್ಯಾತ್ಮಿಕವಾಗಿ ಪುರುಷರು ಏರಬಲ್ಲ ಎತ್ತರಕ್ಕೆ ಸ್ತ್ರೀಯೂ ಏರಬಲ್ಲಳೆಂಬುದನ್ನು ಸಾಧಿಸಿ ತೋರಿಸಿದ ಮೊದಲ ರಾಣಿ ಸುಗ್ಗಲೆ ರಾಣಿಯರು ಕೇವಲ ಅಂತಃಪುರದಲ್ಲಿರುವ ಶೃಂಗಾರಗೊಂಡ ಗೊಂಬೆಗಳಲ್ಲ ಅವರಿಗೂ ಆತ್ಮವಿದೆ ಆ ಆತ್ಮೋನ್ನತಿಯನ್ನು ಅವಳು ಹೇಗೆ ಮಾಡಿಕೊಳ್ಳಬಲ್ಲಳು ಎಂಬುದನ್ನು ಸಾಧಿಸಿ ತೋರಿಸಿದಳು.

## Short Profile

Neelambika Policepatil is working as a Principal & Research Guide in Godutai Doddappa Appa Degree College for Women, S.B. Temple Road, Brahampur, Kalaburagi, Karnataka.

ಮಹಾರಾಣಿ ಸುಗ್ಗಲೆಯ ಬಹುಮುಖ ವ್ಯಕ್ತಿತ್ವವನ್ನು ವರ್ಣಿಸುವ ಶಾಸನಗಳು ಕಾವ್ಯಗಳು ಹೇರಳವಾಗಿ ಸಿಗುತ್ತವೆ.

ಕೆರೆಸಂತೆ ಗ್ರಾಮದ ಶಾಸನದಲ್ಲಿ –

‘ಪಡೆದಳ್ಸಗಲದೇವಿ ಮುನ್ನೆಜಯಸಿಂಹೋರ್ವಿಶನೊಳು ಸೌಮ್ಯಮಂ ಪಡೆದಳು ಸಾಂತಲದೇವಿ ಮತ್ತೆ ತೊದಳೇ ಶ್ರೀ ವಿಷ್ಣು ಭೂಪಾಲನೊಳ್ ಪಡೆದರ್ಮೂವರು ಮೂವರರಸಿಯರು ಸೌಭಾಗ್ಯ ಭಾಗಂಗಳಂ”

ಬಲ್ಲಾಳನ ಮಡದಿ ಕೇತಲದೇವಿಯನ್ನು ವರ್ಣಿಸುವ ಶಾಸನ ಕವಿಗೆ ಸುಗ್ಗಲದೇವಿ ಪ್ರಾಚೀನ ಆದರ್ಶ ರಾಜಪತ್ನಿ ಎನಿಸಿದ್ದಾಳೆ.

ಕ್ರಿ.ಶ. 970ರಲ್ಲಿ ನೂರ್ಮಡಿ ತೈಲಪನು ರಾಷ್ಟ್ರಕೂಟ ದೊರೆಗಳನ್ನು ಸೆದೆ ಬಡಿದ ಚಾಲುಕ್ಯ ವಂಶವನ್ನು ಪುನಃ ಸ್ಥಾಪಿಸಿದ ಅವನ ನಂತರ ಸತ್ಯಾಶ್ರಯ ಅರಸನು ರಾಜ್ಯವಾಳಿದನು.

ಇತಿಹಾಸ ಪ್ರಸಿದ್ಧ ರಾಜಮನೆತನ ಕಲ್ಯಾಣ ಚಾಲುಕ್ಯರದು. ಮುಂದೆ ಆ ಮನೆತನದ ದೊರೆ ಇಮ್ಮಡಿ ಜಯಸಿಂಹ, ಮಾನ್ಯಖೇಟದಿಂದ ತನ್ನ ರಾಜಧಾನಿಯನ್ನು ಪುಟ್ಟಲಕೆರೆಗೆ ವರ್ಗಾಯಿಸಿ ಕ್ರಿ.ಶ. 1015 ರಿಂದ ಕ್ರಿ.ಶ. 1044 ರವರೆಗೆ ಅಲ್ಲಿಂದಲೇ ಆಡಳಿತವನ್ನು ನಡೆಯಿಸಿದವನು ದೇಸಿಂಗರಾಯ ಎಂಬ ಮತ್ತೊಂದು ಹೆಸರನ್ನು ಹೊಂದಿದ್ದ ಜಯಸಿಂಹನು ಮೊದಲು ಜೈನ ಧರ್ಮದವನಾಗಿದ್ದನೆಂದು ತೋರುತ್ತದೆ. ‘ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರ ರತ್ನಾಕರ’ – ದಲ್ಲಿ

“ಹೊಟ್ಟಲ ಕೆರೆಯೆಂಬ ಪುರದಲ್ಲಿ ಸುಗ್ಗಲದೇವಿಯರು ದೇಸಿಂಗರಾಯನೆಂಬ ಜೈನನ ಮದುವೆಯಾಗಿರಲು” ಎಂದು ಹೇಳಲಾಗಿದೆ. ವಿರೂಪಾಕ್ಷಪಂಡಿತನು ತನ್ನ ಕೃತಿ ‘ಚೆನ್ನಬಸವ ಪುರಾಣ’ – ದಲ್ಲಿ “ಜಿನಭಕ್ತನೆಸೆವದೇಸಿಂಗ ಬಲ್ಲಾಳನಾತನ ಮಡದಿ ಸುಗ್ಗಲೆಯು ಶಿವಭಕ್ತೆ. ಎಂದರೆ ಉಲ್ಲೇಖಿಸಲಾಗಿದೆ. ಹೀಗಾಗಿ ಅರಸನ ಜೈನಧರ್ಮದಲ್ಲಿ ಅತೀಶಯವಾದ ಶೃದ್ಧೆಯು, ಗೌರವವನ್ನುಇಟ್ಟುಕೊಂಡವನಾಗಿದ್ದನು. ಆತನ ಮಡದಿಯಾಗಿರುವ ಸುಗ್ಗಲೆಶೈವಧರ್ಮದವಳಾಗಿದ್ದಳು. ಕ್ರಿ.ಶ. 1039ರ ದೇವೂರು ಶಾಸನ ಅವಳು ಶೈವ ಧರ್ಮದವಳಾಗಿದ್ದಳೆಂದು ಹೇಳುತ್ತದೆ.

ದೇವೂರ ಶಾಸನಃ xxxx ಭುವನಾಶ್ರ(ಯ) ಶ್ರೀ ಪೃಥ್ವಿವಲ್ಲಭ ಮಹಾರಾಜ

xxx ಪರಮೇಶ್ವರ ಪರಮಭ‘ಟ್ಟಾರಕಂ ಸತ್ಯಾಶ್ರಯ

ಕುಳತಿಳಕಂ ಚಾಳುಕ್ಯಾಭರಣಂ ಶ್ರೀ ಮಜ್ಜಗದೇರವಲ್ಲದೇವರ

xx (ಯ ಉತ್ತರೋತ್ತ(ರಂ) ಸಲ್ಲುತ್ತಮರೆ ಸ್ವಸ್ತನವರತಪ

xx ಕಲ್ಯಾಣಭ್ಯುದಯ ಸಹಸ್ರಫಳಭೆ ೞಗಭಾಗಿ

xx ದ್ವಿತೀಯ ಲಕ್ಷ್ಮೀ ವಿಶಿಷ್ಟ ಜನ ಕಾಮಧೇನು ಆಶ್ರಿತ

ಜನಕಲ್ಲಲತೆ ರೂಪ ವಿದ್ಯಾಧರಿ ಕಲಿಕಾಲ ಸರಸ್ವತಿ

ಶ್ರೀ ಮಜ್ಜಗದೇಕಮಲ್ಲದೇವರ ವಿಶಾಲವೃಕ್ಷ ಸ್ಥಳ ಮೊವಾಸಿನಿ (ಯು)

ಪಂಶ್ರೀ ಮತ್ಸು.ಗ್ಗಲದೇವಿಯರು ಸಕನ್ರಿ ಪಕಾಳಾತೀತ ಸಂವ್ಸಂ

ರ ಸತಂಗ 151ನೆಯಶುಕ್ಲ ಸಂವತ್ಸರದ ತದ್ದಿರಿಭ್ಯಂ

(ತರ)ದ ಪುಷ್ಯಬ 1 ಬುಧುವಾರ ಮುತ್ತರೋತ್ತರಾಯಣ ಸಂಕ್ರಾನ್ತಿಯನ್ನು ಸ್ವಸ್ತಿ ಯುಮನಿಯ ಮಾಸನಪ್ರಾಣಾ

(ಯಾ) ಮಪ್ರತ್ಮಾಹಾರ ಧ್ಯಾನಧಾರಣ ಜಲಸಮಾಧಿ

ಸಂಪನ್ನ ಪಾಸುಪತ ಯೋಗಾಚಾರ್ಯ ಶ್ರೀ ಮದ್ಬ್ರಹ್ಮರಾಸಿ

ಪಂಡಿತರ್ಗೆ ದೇವಾಪುರದ ಶ್ರೀಮಾರಸಿಂಘೇಶ್ವರ

ದೇವರಂಗಭೋಗಕ್ಕಂ ತಪೋಧನರ್ಗಂ ವಿದ್ಯಾರ್ತ್ಥಿ

(ಶ) ನಾಚ್ಛಾದನ ಪಥೌಷದಾರ್ತ್ಥಮಾಗೆ

ಶಿವಭಕ್ತನಲ್ಲದ ಜೈನಧರ್ಮಾವಲಂಬಿಯಾದ ಪತಿಯ ಜೊತೆಯಲ್ಲಿ ಬಾಳಬೇಕಾದ ಸಂದರ್ಭ ಬಂದಾಗ ಸುಗ್ಗಲೆಯು ಅದನ್ನು ಪ್ರತಿಭಟಿಸಲಿಲ್ಲ, ಅತ್ಯಂತ ಸಹನಶೀಲತೆಯಿಂದ ಪತಿಯೊಂದಿಗೆ

Principal & Research Guide,Godutai Doddappa Appa Degree College for Women,S.B.Temple Road, Brahampur, Kalaburagi, Karnataka.

ನೆಮ್ಮದಿಯ ಬದುಕನ್ನೆ ಸಾಗಿಸಿದವಳು. ಆದರೆ ತನ್ನ ಶಿಭಕ್ತಿಯನ್ನು ಮಾತ್ರ ಅತ್ಯಂತ ಭಕ್ತಿಯಿಂದ ಮುಚ್ಚುಮರೆಯಿಲ್ಲದೆ ಆಚರಿಸಿದವಳು. ದೈಹಿಕವಾಗಿ ಗಂಡು ಹೆಣ್ಣಿನಲ್ಲಿ ಭೇದವಿರಬಹುದು, ಆದರೆ ಆಂತರಂಗಿಕವಾಗಿ ಹೆಣ್ಣು ಗಂಡನಿಗಿಂತ ಕಡಿಮೆಯಿಲ್ಲ ಎಂಬುದನ್ನು ಸಾಧಿಸಿ ತೋರಿದಳು.

ಮಹಾರಾಣಿಯರಿಗೆ ಅವಶ್ಯವಾಗಿರಬೇಕಾದ ದಿಟ್ಟತನ, ಸ್ವಾಭಿಮಾನಗಳೆಲ್ಲವನ್ನು ಸುಗ್ಗಲೆಯಲ್ಲಿ ಕಾಣಬಹುದಾಗಿದೆ. ತನ್ನ ಅಂತರಾತ್ಮಕ್ಕೆ ಒಪ್ಪಿತವಾದುದನ್ನು ಮಾಡಿಯೇ ತೀರುವ ಛಲವಾದಿ ಅವಳು ಅಂತೆಯೇ ತನ್ನ ಆತ್ಮೋದ್ಧಾರಕ್ಕಾಗಿ ಮಾಡುವ ಕೆಲಸಕ್ಕೆ ಗಂಡ ವಿರೋಧ ವ್ಯಕ್ತಪಡಿಸಿದಾಗ ಇಂತಹ ಗಂಡ ತನಗೆ ಬೇಡ ಎಂಬ ನಿಷ್ಠುರವಾದಿಯೂ ಆದಳು ಅವಳ ಈ ನಿಷ್ಠುರತೆಗೆ ಅವಳೊಳಗಿದ್ದ ಆ ಶಿವಭಕ್ತಿಯೇ ಕಾರಣವೇ ಹೊರತು ಅಹಂಕಾರವಲ್ಲ.

ಸುಗ್ಗಲೆಯ ಶೈವನಿಷ್ಠೆಗೆ ಶರಣ ದೇವರ ದಾಸಿಮಯ್ಯ ಪ್ರಮುಖರು. ವಚನಕಾರ ಜೇಡರ ದಾಸಿಮಯ್ಯನವರಿಗಿಂತ ಭಿನ್ನವಾಗಿ ನಿಲ್ಲುವ ದೇವರದಾಸಿಮಯ್ಯ ಹನ್ನೊಂದನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಹುಟ್ಟಿ ವೀರಶೈವ ಧರ್ಮದ ತತ್ತ್ವಗಳನ್ನು ಪ್ರಚಾರ ಮಾಡಿದನು ಈ ಶರಣರ ಶಿಷ್ಯೆಯಾಗಿದ್ದಳು ಸುಗ್ಗಲೆ. ಕೇವಲ ಹೆಸರಿಗೆ ಮಾತೆ ಶಿಷ್ಯಳಾಗಲಿಲ್ಲ ಆ ತತ್ತ್ವಗಳಲ್ಲಿ ಶ್ರದ್ಧೆ, ನಿಷ್ಠೆಯಿಟ್ಟು ನಡೆಯುವವಳಾಗಿದ್ದಳು. ತನ್ನ ಗುರು ದೇವರ ದಾಸಿಮಯ್ಯನವರ ಮೇಲಾಗಲಿ, ಅವರು ಕೊಟ್ಟ ತತ್ತ್ವಗಳ ಮೇಲೆ ರಾಣಿಯ ಭಕ್ತಿ ಎಷ್ಟರ ಮಟ್ಟಿಗಿತ್ತೆಂದ ಕೈಹಿಡಿದ ಗಂಡ ಅರಸ ಜಯಸಿಂಹ ಅವುಗಳನ್ನು ವಿರೋಧ ಮಾಡಿದಾಗ ಗಂಡನನ್ನೆ ಬಿಡುವಷ್ಟರಮಟ್ಟಿಗೂ ಸಿದ್ಧಳಾಗಿದ್ದಳು.

ಗುರುವಿನಲ್ಲಿ ಅಪಾರ ಶ್ರದ್ಧೆ ಗೌರವಗಳನ್ನು ಹೊಂದಿದ್ದವಳಾಗಿದ್ದಳು. ಗುರುವಿನ ಉಪದೇಶ ಪಡೆದು ಮಹಾನ್ ಜ್ಞಾನಿ ಎನಿಸಿಕೊಂಡಿದ್ದಳು ನಿಜಗುಣ ಶಿವಯೋಗಿಗಳು ಹೇಳಿದಂತೆ ' ಜಾಣನು ಲೌಕಿಕ ಪಾರಮಾರ್ಥವೆರಡನ್ನು ಕೂಡಿ ನಡೆಸುತಿಹನು.

ಕ್ರಿ.ಶ 1011ನೇ ಶತಮಾನ ಕರ್ನಾಟಕದಲ್ಲಿ ಜೈನ ಧರ್ಮದ ಉಚ್ಛ್ರಾಯ ಕಾಲ ಅಲ್ಲದೆ ಅರಸ ಜಯಸಿಂಹನು ಈ ಧರ್ಮವನ್ನು ಪರಿಪಾಲಿಸುವವನಾಗಿರುವುದರಿಂದ ಇನ್ನೂ ಈ ಧರ್ಮವು ವೈಶಿಷ್ಟ್ಯವನ್ನು ಪಡೆದುದ್ದಾಗಿತು. ಅರಸನ ರಾಜಧಾನಿಯಲ್ಲಿ 700 ಜೈನ ಬಸದಿಗಳಿದ್ದು ಸುಮಾರು ಹೆಚ್ಚು ಜೈನರಿದ್ದಂತೆ ತಿಳಿದು ಬರುತ್ತದೆ. ಈ ನಿಜಸ್ಥಿತಿ ತನ್ನ ಗುರು ದೇವರ ದಾಸಿಮಯ್ಯನವರಲ್ಲಿ ಹೇಳಿ ರಾಜಧಾನಿಗೆ ಬರಲು ವಿನಂತಿಸಿಕೊಳ್ಳುತ್ತಾಳೆ.

ಈಗಾಗಲೆ ನಾಡಿನ ಎಲ್ಲೆಡೆ ತಿರುಗಿ ಶೈವ ಧರ್ಮ ತತ್ತ್ವಗಳನ್ನು ಪ್ರಚಾರಮಾಡಿ ಹಲವು ಪವಾಡಗಳನ್ನು ಮಾಡಿದ್ದ ದೇವರದಾಸಿಮಯ್ಯ ತನ್ನ ಶಿಷ್ಯಳ ಧರ್ಮ ನಿಷ್ಠೆ ಕಂಡು ನೇರವಾಗಿ ರಾಜಧಾನಿ ಪೊಟ್ಟಚೇರುಗೆ ಬರುತ್ತಾನೆ. ಅಲ್ಲಿ ನೇಯ್ಗೆ ಕಾಯಕದ ದೇವಾರ ಸಮಾಜದ ಜನರು ಸಾಕಷ್ಟು ಸಂಖ್ಯೆಯಲ್ಲಿದ್ದರು. ನೇಯ್ಗೆ ಕಾಯಕದಲ್ಲಿ ದೇವಾರ ಮತ್ತು ಜೇಡರ ಎಂಬೆರೆಡು ಪಂಗಡಗಳಿದ್ದು ದೇವಾತಕುಲದವರು ರೇಶ್ಮೇ ವಸ್ತ್ರಗಳನ್ನು ಮಾತ್ರ ನೇಯ್ದರೆ ಜೇಡರ ಪಂಗಡದವರು ನೂಲಿನ ಹತ್ತಿಯ ಬಟ್ಟೆ ನೇಯುವವರಾಗಿದ್ದರು. ದೇವರ ದಾಸಿಮಯ್ಯ ರೇಶಿಮೆ ಬಟ್ಟೆ ನೇಯುವವರಾದರೆ ಜೇಡೆ ದಾಸಿಮಯ್ಯ ನೂಲಿನ ಬಟ್ಟೆಯನ್ನು ನೇಯುವ ಕಾಯಕ ಮಾಡುತ್ತಿದ್ದಂತೆ ತೋರುತ್ತದೆ. ಈ ದೇವಾರ ಸಮಾಜದವರು ದಾಸಿಮಯ್ಯನವರಿಗಾಗಿ ಒಂದು ಮಠವು ಅಲ್ಲಿಯೆ ಕಟ್ಟಿ ಕೊಟ್ಟಿದ್ದರು.

ಗಂಡನಿತ್ತ ವಚನ ಪಂಗಡಗಳಿದ್ದು ದೇವಾತಕುಲದವರು ರೇಶ್ಮೇ ವಸ್ತ್ರಗಳನ್ನು ಮಾತ್ರ ನೇಯ್ದರೆ ಜೇಡರ ಪಂಗಡದವರು ನೂಲಿನ ಹತ್ತಿಯ ಬಟ್ಟೆ ನೇಯುವವರಾಗಿದ್ದರು. ದೇವರ ದಾಸಿಮಯ್ಯ ರೇಶಿಮೆ ಬಟ್ಟೆ ನೇಯುವವರಾದರೆ ಜೇಡೆ ದಾಸಿಮಯ್ಯ ನೂಲಿನ ಬಟ್ಟೆಯನ್ನು ನೇಯುವ ಕಾಯಕ ಮಾಡುತ್ತಿದ್ದಂತೆ ತೋರುತ್ತದೆ. ಈ ದೇವಾರ ಸಮಾಜದವರು ದಾಸಿಮಯ್ಯನವರಿಗಾಗಿ ಒಂದು ಅಲ್ಲಿಯೆ ಮಠವು ಕಟ್ಟಿ ಕೊಟ್ಟಿದ್ದರು.

ರಾಣಿ ಸುಗ್ಗಲೆ ತಡಮಾಡಲಿಲ್ಲ ಗೌರವಾದರಗಳಿಂದ ತನ್ನ ಗುರುವನ್ನು ಅರಮನೆಗೆ ಕರೆಯಿಸಿಕೊಂಡಳು. ಅಲ್ಲಿದ್ದ ಜೈನ ಮುನಿಗಳಿಗೆ ಇದನ್ನು ಸಹಿಸದಾದರು. ಈತನು ಇಲ್ಲಿಗೆ ಬಂದರೆ ತಮ್ಮ ಖ್ಯಾತಿ ಉಳಿಯುವದಿಲ್ಲವೆಂಬುದನ್ನು ಮನಗಂಡು ಅರಸನಲ್ಲಿಗೆ ಹೋಗಿ ರಾಣಿ ಸುಗ್ಗಲೆಯು ಮಾಡುವ ಎಲ್ಲಾ ಕಾರ್ಯಗಳನ್ನು ಬಿಟ್ಟು ಬಿಡದೆ ಅರಸನಿಗೆ ಹೇಳಿದಾಗ ರಾಜ ತನ್ನ ಮಡದಿಯನ್ನು ಕರೆಯಿಸಿ,

'ಪತಿಗೆ ಸತಿಗೆಯು ಚೀರಿ ಚೀರಿಂ
ಗತಿಗಳುಂಟೇ ಯಾವ ನಾಡೊಳು
ಸತಿಗೆ ಪತಿಯೇ ಗುರುವಲಾ ಪತಿದೇವ ಗುರು

ಎನಲು

ಸತಿಯೆ ನಿನಗೆಲ್ಲಿಯ ಗುರುಗಳೇ
ಗತಿಯನುಳಿದವರಂ ಕಳುಹು ಜಿನ
ಯತಿಗಳೆಪೆದಡೆ ವಿಪರೀತಂಗಳಹವಿನ್ನು"

ಎಂದು ನುಡಿಯುವನು. ಅರಸನ ನಿರಾಕರಣೆಯ ನುಡಿ ರಾಣಿ ಸುಗ್ಗಲೆಯ ಆತ್ಮಾಭಿಮಾನವನ್ನು ಬಡಿದೆಬ್ಬಿಸಿತು. ಕೋಪ್ರೋದ್ರಿಕಳಾಗಿ 'ನೀನಿತ್ತ ಸೂನ್ನತಯುತ ವಚನಮಂ ಮರೆಯಲಹುದೇ – ಎನ್ನುತ್ತಾ–

'ಮಾಡಿಕೋ ಮತ್ತೋಬ್ಬ ಸತಿಯಂ
ಕೂಡದೆನ್ನಂ ಬಿಟ್ಟುಕಳೆ ಶಶಿ
ಚೂಡನಲ್ಲದತಃ ಪರವನಾನರೆಯನಲ್ಲದಡೆ
ನಾಡ ಮಾತುಗಳೇಕೆ ಜಗದೊಳು
ಪಾಡೆ ಎನೊಡೆಯರಿಗೆ ಜೈನರ
ನಾಡಿ ಸಾಗಮತರ್ಕಶಾಸ್ತ್ರ ಪುರಾಣವಾದದಲಿ

ಎಂದು ಹೇಳುತ್ತಾಳೆ. ಆ ಸಂದರ್ಭದಲ್ಲಿ ರಾಣಿ ಸುಗ್ಗಲೆಗೆ ಅರಸ, ಅರಮನೆ, ಭೋಗ ಭಾಗ್ಯ – ಎಲ್ಲವೂ ತ್ಯಾಜ್ಯವೆನಿಸಿದ್ದವು. ಎಲ್ಲವನ್ನು ಬಿಟ್ಟು ಗುರುಸೇವೆ ಮಾಡುತ್ತಾ ತತ್ತ್ವ ಪ್ರಚಾರ ಗೈಯುತ್ತಾ ಇರಬೇಕೆಂದು ಯೋಚಿಸಿದ್ದಳು. ತನ್ನ ಆತ್ಮೋದ್ಧಾರದ ಹಾದಿಯಲ್ಲಿ ನಡೆಯದ, ತನಗೆ ಅಡ್ಡಿಯನ್ನುಂಟು ಮಾಡುವ ಗಂಡ ತನಗೆ ಬೇಡ ಎನ್ನುವಷ್ಟರ ಮಟ್ಟಿಗೆ ನಿಷ್ಟುರಳಾದಳು.

ಗಂಡನನ್ನು ತನ್ನವಳನ್ನಾಗಿ ಮಾಡಿಸಿಕೊಳ್ಳಬೇಕೆಂಬ ಕುತ್ಸಿತ ಬುದ್ಧಿ ಅವಳದಲ್ಲ. ತಾನು ಆಚರಿಸುತ್ತಿರುವ ಶಿವಮಾರ್ಗಕ್ಕೆ ಪರಿ ಬಾರದಿದ್ದರೂ ಅವನನ್ನು ದೂಷಿಸಿರಲಿಲ್ಲ, ಆದರೆ ಶಿವ ಮತ್ತು ಗುರು ಮಾರ್ಗವನ್ನು ಅರಸ ಹೀಗೆಳೆದಾಗ ಮಾತ್ರ ಸುಗ್ಗಲೆ ತಾಳಿಕೊಳಲಿಲ್ಲ.

ಗಂಡನ ಮಾತನ್ನು ನೆನಪಿಸುತ್ತಾಳಲ್ಲದೆ, ಬೇರೊಬ್ಬಳನ್ನು ಮದುವೆ ಮಾಡಿಕೊಳ್ಳಲು ತಿಳಿಸುತ್ತಾಳೆ. ನಿನ್ನ ಜೈನ ಧರ್ಮ ಘನವೆಂದು "ನಿನ್ನ ಮುನಿಗಳು ಸಿದ್ಧಮಾಡಿ ತೋರಿಸಲಿ ನಾನು ಜೈನಧರ್ಮ ಸ್ವೀಕರಿಸುವುದಾಗಿ" ಹೇಳುತ್ತಾಳೆ.

ಅರಸ ಜೈನಮುನಿಗಳನ್ನು ಅರಮನೆಗೆ ಕರೆಯಿಸುವಷ್ಟರಲ್ಲಿಯೇ ರಾಣಿ ಸುಗ್ಗಲೆ ತನ್ನ ಗುರುವನ್ನು ಅರಮನೆಗೆ ಕರೆಯಿಸಿಕೊಡು ಅವರ ಸೇವೆಯಲ್ಲಿರುವಳು. ಆಗ ಅಲ್ಲಿಗೆ ಬಂದ ಜೈನ ಮುನಿಗಳಿಗೂ ದೇವರ ದಾಸಿಮಯ್ಯನವರಿಗೂ ವಾದ ವಿವಾದ ಪ್ರಾರಂಭಗೊಳ್ಳುತ್ತವೆ. ಆ ಜೈನ ಮುನಿಗಳ ಗೊಳ್ಳು ವಾದವನ್ನು ತಳ್ಳಿಹಾಕಿ ಜಗಕ್ಕಾಧರನು ಪರಶಿವನಲ್ಲದೆ ಬೇರೊಬ್ಬರಲ್ಲವೆಂಬುದನ್ನು ಶಾಸ್ತ್ರಾಧರಗಳಿಂದ ನಿರೂಪಿಸುವನು.

'ವಿಶ್ವಕರ್ತನು ರಾಮನಾಥನು
ವಿಶ್ವಭರ್ತನು ರಾಮನಾಥನು
ವಿಶ್ವಹರ್ತನು ರಾಮನಾಥನು ವಿಶ್ವಸುರರೊಳಗೆ
ವಿಶ್ವಗುರುವುಂ ರಾಮನಾಥನು
ವಿಶ್ವಮಯನುಂ ರಾಮನಾಥನು
ವಿಶ್ವಧಾತಂ ರಾಮನಾಥನು ಮತ್ತೆ ಪರವಿಲ್ಲ

ಎಂದು ಹೇಳಿ ಶಿವತ್ವದ ಪಾರಮ್ಯವನ್ನು ನಿರೂಪಿಸುವನು. ವಾದದಲ್ಲಿ ಸೋಲಿಸಲಾಗಲಿಲ್ಲವೆಂದು ಅರಿವುಂಟಾದಾಗ ಹೇಯಕೃತ್ಯಗೈಯಲು ಮುಂದಾದರು. ಉಗ್ರಸರ್ಪವೊಂದನ್ನು

ಗಡಿಗೆಯೊಳಗಿಟ್ಟು "ಇಹನೇನಿದರಲ್ಲಿ ಮೃಡಸರ್ವಗತನೆಂದು ಹೇಳುವಿಯಾ" ಎಂದಾಗ, ಅಂಜದೆ ಅಳಕದೆ ದೇವರ ದಾಸಿಮಯ್ಯ ಆ ಸರ್ಪವನ್ನು ಹಿಡಿಯುವನು. ಅವರ ಶಿವಹಸ್ತದಿಂದ ಅದು ಸ್ಪಟಿಕ ಲಿಂಗವಾಯಿತು. ಅದಕ್ಕೆ 'ಉತ್ತರನಾಥ' – ನೆಂಬ ಹೆಸರಿಟ್ಟು ಅಲ್ಲಿಯೇ ಅದನ್ನು ಸ್ಥಾಪಿಸಲಾಯಿತು.

ತನ್ನ ಕಣ್ಣೆದುರಿನಲ್ಲಿಯೇ ನಡೆದುದೆಲ್ಲವನ್ನು ವೀಕ್ಷಿಸಿದ ಅರಸ ಜಯಸಿಂಹನು ದೇವರ ದಾಸಿಮಯ್ಯನವರ ಪ್ರಾಣಕ್ಕೆ ಶರಣು ಹೋಗುವನಲ್ಲದೆ ತಾನೂ ಅವರ ಶಿಷ್ಯನಾದನು. ಚನ್ನಬಸವ ಪುರಾಣದಲ್ಲಿ –

'ಜಿನಭಕ್ತನೆಸುವ ದೇಸಿಂಗ ಬಲ್ಲಳನಾ
ತನ್ನ ಮಡದಿ ಸುಗ್ಗಲೆಯು ಶಿವಭಕ್ತೆ ತನ್ನ ಗುರು
ವೆನಿಪ ದೇವರದಾಸನಂ ಜಿನರ ಕೊಡೆವಾದಾಂತೆಯ್ಯ ಪೆಟ್ಟಿಗೆಯೊಳು
ಗೊನೆವ ಘಟಸರ್ಪನಂ ಚಂದ್ರಕಾಂತದ ಲಿಂಗ
ವನೆ ಮಾಡಿ ಗೆಲಿಸಿ ಜೈನಗಾಜ್ಞೆಯಂ ಮಾಡಿ
ಜಿನಪತಿಯನಂದು ಶಿವಭಕ್ತನಂ ಮಾಡಿದಳದೇನೆಂಬೆನಚ್ಚರಿನು

ವೆಂದು ವರ್ಣಿಸಲಾಗಿದೆ. ಅಲ್ಲದೆ ರಾಜಧಾನಿಯಲ್ಲಿದ್ದ ಏಳ್ನೂರು ಬಸದಿಗಳನ್ನು ಹೊಡೆದು ಹಾಕಿ ಅಲ್ಲೆಲ್ಲಾ ಶಿವಲಿಂಗಗಳನ್ನು ಸ್ಥಾಪಿಸಲಾಯಿತು. ಹೀಗೆ ಶಾಸನಗಳಲ್ಲಿ ಕನ್ನಡದ ಕಾವ್ಯ ಪುರಾಣಗಳಲ್ಲಿ ಸುಗ್ಗಲೆಯ ಶಿವಪಾರಮ್ಯವನ್ನು ವರ್ಣಿಸಿರುವ ವಿವರಗಳು ಮನೋಜ್ಞವಾಗಿವೆ.

ತಾನು ನಂಬಿದ ಧರ್ಮ ಎಲ್ಲಕ್ಕಿಂತಲೂ ಹೆಚ್ಚಿನದು ಎಂಬುದನ್ನು ಸಾಬೀತು ಮಾಡಿದಳು. ಗಂಡನು ಅನುಸರಿಸಿದ ಧರ್ಮದಲ್ಲಿ ನಡೆದ ಸ್ತ್ರೀಯರು ಬಹಳಷ್ಟು ಮಂದಿ ಇದ್ದಾರೆ. ಆದರೆ ಹೆಂಡತಿ ಅನುಸರಿಸಿದ ಧರ್ಮ ಸ್ವೀಕಾರ ಮಾಡಿದವರಲ್ಲಿ ಚಾಲುಕ್ಯ ಜಯಸಿಂಹ ಮೊದಲಿಗನಾಗಿದ್ದಾನೆ.

ಸುಗ್ಗಲೆ ಮಹಾರಾಣಿಯ ಈ ಶೈವನಿಷ್ಠೆ ಅಂದು ಮನೆಮಾತಾಗಿ ಉಳಿಯಿತು. ಅವಳ ನಂತರದಲ್ಲಿ ಕರ್ನಾಟಕ ಇತರ ರಾಣಿಯರ ವ್ಯಕ್ತಿತ್ವವನ್ನು ವರ್ಣಿಸುವಾಗ ಸುಗ್ಗಲೆದೇವಿಯು ಕವಿಗಳಿಗೆ ಶಾಸನಕಾರರಿಗೆ ಉದಾಹರಣೆಯಾದಳು. ಹಿಂದೆ ನಿರೂಪಿಸಿದ ಕೆರೆಸಂತೆ ಶಾಸನದಂತೆ, ಹಳೇಬೀಡಿನ ಶಾಸನದಲ್ಲಿಯೂ ಕುವರ ಲಕ್ಷ್ಮನ ಹೆಂಡತಿ ಸುಗ್ಗಲೆಯನ್ನು ವರ್ಣಿಸುವಾಗ ಸುಗ್ಗಲೆಯನ್ನು ಆ ಸಾಸನ ಹೀಗೆ ವರ್ಣಿಸುತ್ತದೆ.

'ಜಯಸಿಂಹ ಕ್ಷಿತಿಪಾಳಕಂಗೆ ಜಗಮೆಲ್ಲಂ ಬಣ್ಣಿಸಲ್ ಪೊಣ್ಬುಭಾ
ಕ್ಷೇಯನಾ ಸುಗ್ಗಲದೇವಿ ಕೊಟ್ಟ ತೆರದಿಂ ಬಲ್ಲಾಳ ಭೂಪೋತತಮ
ಪ್ರಿಯಪುತ್ರಂಗೆ ಕುಮಾರಲಕ್ಷ್ಯಂ ರಥಿನೀನಾಥಂಗೆ ಕೊಟ್ಟಳ್ ಮನಃ
ಪ್ರಿಯೆಯಿಂ ಸುಗ್ಗಲಾದೇವಿ ಭಾಷೆಯ ನಿಳಾಚಕ್ರಂ ಪೊಗಳ್ವನ್ನೆಗಂ"

**ಅಡಿ ಟಿಪ್ಪಣೆಗಳು: *(References)***


1] ಎಂ.ಎ.ಆರ್. 1975 ಕಡೂರು ಸಂ. 64 ಕೆರೆಸಂತೆ

2] ಭೈ.ಕಾ.ಕ.ಸೂ.ರ.ಭಾಗ – 2 ಸಂ.ಡಾ. ಆರ್.ಸಿ. ಹಿರೇಮಠ ಮತ್ತು ಡಾ. ಎಂ.ಎಸ್.ಸುಂಕಾಪುರ ಪುಟ–35

3] ಚನ್ನಬಸವ ಪುರಾಣ ಭಾಗ್ಯ 1 ಸಂಧಿ – 57 ಪದ್ಯ ॥

4] ಸೌ.ಇ.ಇ.XX ಶಾಸನ ಸಂಖ್ಯೆ 23 ದೇವೂರು (ಸಿಂದಗಿ)

5] ಬಸವಪುರಾಣ ಸಂ. ಡಾ॥ ಆರ್.ಸಿ.ಹಿರೇಮಠ ಸಂಧಿ 50 ಪದ್ಯ 6

6] ಬಸವಪುರಾಣ ಸಂ. ಡಾ॥ ಆರ್.ಸಿ.ಹಿರೇಮಠ ಸಂಧಿ 50 ಪದ್ಯ 9

7] ಬಸವಪುರಾಣ ಸಂ. ಡಾ॥ ಆರ್.ಸಿ. ಹಿರೇಮಠ ಸಂಧಿ 50 ಪದ್ಯ 13

8] ಚನ್ನಬಸವ ಪುರಾಣ ಭಾಗ್ಯ 1 : ಪ್ರಕಾಶಕರು ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆ, ಧಾರವಾಡ ಸಂಧಿ 57 ಪದ್ಯ 11 ಪುಟ 657

9] ಎ.ಪಿ.ಕ – 2 ಕ್ರಮಸಂಖ್ಯೆ 112, ಹಳೇಬೀಡು





**Neelambika Policepatil**
Principal & Research Guide,Godutai Doddappa Appa Degree College for Women,S.B.TempleRoad, Brahampur, Kalaburagi, Karnataka.